


ರಿಲ್ಯಾಕ್ಸಿಂಗ್...

ಎರಡೂ ಮನೆಯವರ ಮಧ್ಯೆ ಉತ್ತಮ ಬಾಂಧವ್ಯ ಬೆಳೆಯಲು ಸಹಕಾರಿಯಾಗುತ್ತದೆ. ಒಂದು ರೀತಿಯ 'ಫ್ಯಾಮಿಲಿ ಗೆಟ್ ಟುಗೆದರ್' ತರಹ ಅನಿಸ್ತು. ಮದುವೆ ಹಿಂದಿನ ದಿನ ಸಂಜೆ ವಿವಿಧ ಗೇಮ್ಸ್ ಆಡಿದೆವು. ಎಲ್ಲರೂ ಖುಷಿಯಿಂದ ಪಾಲ್ಗೊಂಡಿದ್ದೆವು. 'ಇಂಥ ಮದುವೆ ಎಲ್ಲೂ ನೋಡಿಲ್ಲ, ಅಷ್ಟೊಂದು ಚೆನ್ನಾಗಿತ್ತು' ಎಂದು ಬಂದವರೆಲ್ಲ ಹೇಳಿದ್ದರಿಂದ 'ಡೆಸ್ಟಿನೇಷನ್ ಮದುವೆ' ಮಾಡಿದ್ದು ಸಾರ್ಥಕ ಎನಿಸಿತು' ಎನ್ನುತ್ತಾರೆ ಶೋಭಿತಾ.

'ಗೋವಾದ ಡೆಸ್ಟಿನೇಷನ್ ಮದುವೆ ಬಹಳ ಜನಪ್ರಿಯ. ಇಲ್ಲಿಗೆ ತಲುಪಲು ವಿಮಾನ, ರೈಲು, ಬಸ್, ಕಾರು... ಹೀಗೆ ಎಲ್ಲ ರೀತಿಯ ಪ್ರಯಾಣದ ವ್ಯವಸ್ಥೆ ಇದೆ. ಖರ್ಚುವೆಚ್ಚ ಎಲ್ಲ ಸೇರಿ ನಮಗೆ ಸುಮಾರು 75 ಲಕ್ಷ ರೂಪಾಯಿಯಷ್ಟು ಖರ್ಚಾಗಿದೆ. ಬಂದವರಿಗೆಲ್ಲ ಉಡುಗೊರೆಗಳನ್ನೂ ನೀಡಿ ಕಳಿಸಿದೆವು. ಕೆಲವೇ ಜನರ ಸಮ್ಮುಖದಲ್ಲಿ ಮದುವೆ ಮಾಡಿಕೊಳ್ಳಬೇಕು ಎಂದು ಬಯಸುವವರಿಗೆ ಡೆಸ್ಟಿನೇಷನ್ ಮದುವೆ ಉತ್ತಮ ಆಯ್ಕೆ' ಎನ್ನುವುದು ಶೋಭಿತಾ ಅವರ ಅಭಿಪ್ರಾಯ.

## ಹಿಂದಿ ಸಿನಿಮಾದ ಪ್ರಭಾವ

'ಡೆಸ್ಟಿನೇಷನ್ ಮದುವೆ' ಬಯಸುವವರಿಗಾಗಿ ಸುಂದರ ಪ್ರವಾಸಿ ಸ್ಥಳದಲ್ಲಿ ವಧು–ವರರು ಇಚ್ಛಿಸಿದ ವಿನ್ಯಾಸದಲ್ಲಿ ಸೆಟ್ ಹಾಕಿ ಅಲ್ಲಿ ವಿವಾಹವನ್ನು ನಡೆಸಿಕೊಡುವ ಜವಾಬ್ದಾರಿಯನ್ನು ನಮ್ಮ ಸಂಸ್ಥೆ ವಹಿಸಿಕೊಳ್ಳುತ್ತದೆ. ಮದುವೆಗೆ ಮುನ್ನ ನಡೆಯುವ ದೇವತಾ ಕಾರ್ಯಕ್ಕೆ ಚಪ್ಪರದ ಅಲಂಕಾರ, ದೀಪಾಲಂಕಾರ, ಪೂಜೆಯ ಸಿದ್ಧತೆಗಳನ್ನು ನಾವು ಮಾಡಿಕೊಳ್ಳುತ್ತೇವೆ. ಅಲ್ಲದೆ ಮೆಹೆಂದಿ ಹಾಗೂ ಸಂಗೀತ್‌ಗಾಗಿ ನಮ್ಮ ಬಳಿಯೇ ಕಲಾವಿದರ ತಂಡವಿದೆ. ಸಂಗೀತ್‌ನಲ್ಲಿ ಉತ್ತರ ಭಾರತ ಶೈಲಿಯ ದಾಂಡಿಯಾವನ್ನು ಹೆಚ್ಚು ಜನರು ಇಷ್ಟಪಡುತ್ತಾರೆ. ಸುಮಾರು ಏಳೆಂಟು ವರ್ಷಗಳಿಂದ ಈ ಸಂಗೀತ್ ಜನಪ್ರಿಯಗೊಂಡಿದ್ದು,



ಇದಕ್ಕೆ ಹಿಂದಿ ಸಿನಿಮಾಗಳ ಪ್ರಭಾವವೇ ಪ್ರಮುಖ ಕಾರಣ' ಎನ್ನುತ್ತಾರೆ ಮಂಗಳೂರಿನಲ್ಲಿರುವ ವೆಡ್ಡಿಂಗ್ ಇವೆಂಟ್ ಮ್ಯಾನೇಜರ್ ರತ್ನಾಕರ ರೈ.

ಮದುವೆಯ ನಿಶ್ಚಿತಾರ್ಥಕ್ಕೆ ಮುನ್ನ ಕೆಲವೊಮ್ಮೆ ಮದುವೆಗೂ ಮೊದಲು ವಧುವರರು ಪ್ರಿವೆಡ್ಡಿಂಗ್ ಫೋಟೊ/ವಿಡಿಯೊ ಶೂಟ್ ಬಯಸುತ್ತಾರೆ. ಇದು ಈಗಿನ ಟ್ರೆಂಡ್ ಕೂಡ ಹೌದು. ಮಂಗಳೂರಿನ ಬೀಚ್, ಕುಂದಾಪುರ, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ, ಕೇರಳ, ಪುದುಚೇರಿ, ಗೋವಾ... ಹೀಗೆ ಸುಂದರ ತಾಣಗಳಲ್ಲಿ ವಿಡಿಯೊ ಶೂಟ್ ಮಾಡಿಸಿಕೊಡುತ್ತೇವೆ. ಮದುವೆಯನ್ನು ಸಹ ಸಿನಿಮಾ ಶೈಲಿಯಲ್ಲಿ ಚಿತ್ರೀಕರಿಸಿಕೊಡಬೇಕೆಂಬ ಬೇಡಿಕೆಯೂ ಬರುತ್ತದೆ. ಇಂಥ ಕಾರ್ಯವನ್ನೂ ನಾವು ಮಾಡುತ್ತೇವೆ' ಎಂದು ಹೇಳುತ್ತಾರೆ ಈ 'ಮದುವೆಯ ವ್ಯವಸ್ಥಾಪಕ'.

ಸಾಮಾನ್ಯವಾಗಿ ಹೊಸ ವರ್ಷಾಚರಣೆಗೆ, ಮದ್ಯಪ್ರಿಯರಿಗೆ ಸ್ನೇಹಿತರೊಂದಿಗೆ ಮೋಜು ನಡೆಸಲು ಗೋವಾ ನೆಚ್ಚಿನ 'ಪಾರ್ಟಿ ಹಬ್' ಎನಿಸಿಕೊಂಡಿತ್ತು. ಆದರೆ ಇದೀಗ ಗೋವಾ ಡೆಸ್ಟಿನೇಷನ್ ಮದುವೆಗೆ ಹೆಸರಾಗಿದೆ. ಇಲ್ಲಿನ ಕಡಲ ತೀರದಲ್ಲಿ ವಿವಾಹ ಬಂಧನಕ್ಕೊಳಗಾಗುವುದು ಅನೇಕರ ಕನಸು ಕೂಡ ಹೌದು. ತಮ್ಮ ಬಾಳಸಂಗಾತಿಯನ್ನು ತಮ್ಮಿಷ್ಟದಂತೆ ಆಯ್ಕೆ ಮಾಡಿಕೊಂಡು, ಮದುವೆಯನ್ನೂ ಸುಂದರ, ಸ್ಮರಣೀಯ ತಾಣದಲ್ಲಿ ಮಾಡಿಕೊಂಡರೆ ಮದುವೆಯ ಸುಮಧುರ ಕ್ಷಣಗಳೂ ನೆನಪಿನಂಗಳದಲ್ಲಿ ಸದಾ ಹಸಿರಾಗಿರಲು ಸಾಧ್ಯ.